**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.**

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ : 16.11.2023
ಪಾಟಿ ಸವಾಲು : ಆರೋಪಿ ಪರ ಶ್ರೀ ಬಿ.ಎಲ್.ಜಿ ವಕೀಲರಿಂದ

ನಾನು 3 ನೇ ತರಗತಿವರೆಗೆ ವ್ಯಾಸಂಗ ಮಾಡಿದ್ದೇನೆ. ನನಗೆ ಕನ್ನಡ ಭಾಷೆಯನ್ನು ಓದಲು ಬರೆಯಲು ಬರುವುದಿಲ್ಲ. ನಾನು ಸುಮಾರು 25 ವರ್ಷಗಳಿಂದ ಡ್ರೈವಿಂಗ್ ಕೆಲಸ ಮಾಡುತಿದ್ದೇನೆ. ನನಗೆ ಸೇರಿದ 10 ಗುಂಟೆ ವಿಸ್ತೀರ್ಣದ ಜಮೀನು ಇರುತ್ತದೆ. ಸದರಿ ಜಮೀನಿನಲ್ಲಿ ಭತ್ತ ಮತ್ತು ರಾಗಿ ಬೆಳೆಯನ್ನು ಬೆಳೆಯುತ್ತೇನೆ. ನನ್ನ ಜಮೀನಿನಲ್ಲಿ ಬೆಳೆಯುವ ಬೆಳೆ ನನ್ನ ಜೀವನ ಸಾಗಿಸುವಷ್ಟು ಆಗುತ್ತದೆ ಎಂದರೆ ಸರಿ.

ನನಗೆ ಇರುವ 10 ಗುಂಟೆ ಜಮೀನು ಹೊರತುಪಡಿಸಿ ನನಗೆ ಬೇರೆ ಆದಾಯದ ಮೂಲ ಇಲ್ಲವೆಂದರೆ ಸಾಕ್ಷಿಯು ನನ್ನ ಹೆಂಡತಿ ಟೈಲರಿಂಗ್ ಕೆಲಸ ಮಾಡುತ್ತಾಳೆ ಮತ್ತು ನಾನು ಡ್ರೈವಿಂಗ್ ಕೆಲಸ ಮಾಡುತ್ತೇನೆ ಆದ ಕಾರಣ ನನಗೆ ಬೇರೆ ಆದಾಯದ ಮೂಲ ಇರುತ್ತದೆ ಎಂದು ನುಡಿಯುತ್ತಾರೆ.

ನಾನು ಡ್ರೈವಿಂಗ ಕೆಲಸ ಮಾಡುತ್ತೇನೆಂದು ತೋರಿಸುವ ಸಲುವಾಗಿ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಸಾಕ್ಷಿ ಮುಂದುವರೆದು ನನ್ನ ಹತ್ತಿರ ಚಾಲನಾ ಪರವಾನಿಗೆ ಇರುತ್ತದೆ ಬೇಕಾದಲ್ಲಿ ಅದನ್ನು ಹಾಜರುಪಡಿಸುತ್ತೇವೆಂದು ನುಡಿಯುತ್ತಾರೆ. ನನ್ನ ಮತ್ತು ನನ್ನ ಹೆಂಡತಿಯ ಆದಾಯ ಸೇರಿಸಿದರೆ ನಮಗೆ ವಾರ್ಷಿಕವಾಗಿ ರೂ.1,00,000-1,20,000/- ಆದಾಯವಿರುತ್ತದೆ. ನಮಗೆ ವಾರ್ಷಿಕವಾಗಿ ರೂ.1,00,000-1,20,000/- ಆದಾಯ ಇದೆ ಎಂದು ತೋರಿಸುವ ಸಂಬಂಧ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಮಗೆ ವಾರ್ಷಿಕವಾಗಿ ರೂ.20,000/- ಗಳಷ್ಟು ಖರ್ಚು ಇರುತ್ತದೆ.

ನನಗೆ ಎಸ್.ಬಿ.ಐ, ಅರಕೆರೆ ಬ್ರಾಂಚ್‌ನಲ್ಲಿ ಖಾತೆ ಇರುತ್ತದೆ. ನಾನು ಸುಮಾರು 6-7 ವರ್ಷಗಳ ಹಿಂದೆ ಖಾತೆಯನ್ನು ಬ್ಯಾಂಕ್ ನಲ್ಲಿ ತೆರೆದಿದ್ದೇನೆ. ಆಗಿನಿಂದಲೂ ಕೂಡ ಬ್ಯಾಂಕ್ ನಲ್ಲಿ ದುಡ್ಡು ಹಾಕುವುದು ಮತ್ತು ತೆಗೆದುಕೊಳ್ಳುವುದನ್ನು ಮಾಡುತ್ತಿದ್ದೇನೆ. ವಾರ್ಷಿಕವಾಗಿ ನಾನು ಸುಮಾರು ರೂ.70,000-80,000/- ವ್ಯವಹಾರವನ್ನು ಬ್ಯಾಂಕ್ ನಲ್ಲಿ ಮಾಡುತ್ತೇನೆ. ಬ್ಯಾಂಕ್ ವ್ಯವಹಾರ ಹೊರತುಪಡಿಸಿ ನನಗೆ ಬೇರೆ ಯಾವುದೇ ವ್ಯವಹಾರ ಇಲ್ಲವೆಂದರೆ ಸರಿ.

2020-2021 ಸಾಲಿನಲ್ಲಿ ನನ್ನ ಬ್ಯಾಂಕ್ ವ್ಯವಹಾರ ವಾರ್ಷಿಕವಾಗಿ ಎಷ್ಟು ಇತ್ತು ಎಂದು ನನಗೆ ನೆನಪಿಲ್ಲ. ಸದರಿ ಸಾಲಿನಲ್ಲಿ ನನ್ನ ಬ್ಯಾಂಕ್ ಖಾತೆಯಲ್ಲಿ ಎಷ್ಟು ಹಣ ಜಮಾ ಇತ್ತು ಎನ್ನುವ ಬಗ್ಗೆ ನನಗೆ ನೆನಪಿಲ್ಲ. ನನ್ನ ಬ್ಯಾಂಕ್ ಖಾತೆಗೆ ಸಂಬಂಧಿಸಿದ ಅಕೌಂಟ್ ಸ್ಟೇಟ್ ಮೆಂಟ್ ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ.

ನಾನು ಸರ್ಕಾರದಿಂದ ಕೊಡುವ ಬಿ.ಪಿ.ಎಲ್. ಕಾರ್ಡ ಹೊಂದಿದ್ದೇನೆ ಎಂದರೆ ಸರಿ. ವಾರ್ಷಿಕವಾಗಿ ರೂ.15,000/- ಕ್ಕೂ ಕಡಿಮೆ ಆದಾಯವಿರುವ ವ್ಯಕ್ತಿಗಳಿಗೆ ಸರ್ಕಾರದಿಂದ ಬಿಪಿಎಲ್ ಕಾರ್ಡ ಕೊಡಲಾಗುತ್ತದೆ ಎಂದರೆ ಸರಿ. ನನಗೆ ಸೇರಿದ ಬಿ.ಪಿ.ಎಲ್ ಕಾರ್ಡ್ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ.

ಇದೇ ನ್ಯಾಯಾಲಯದಲ್ಲಿ ಭಾಗ್ಯಮ್ಮ ಎನ್ನುವವರ ವಿರುದ್ಧ ಸಿಸಿ.504/2021 ರಂತೆ ಕೇಸನ್ನು ರೂ.5 ಲಕ್ಷ ಚೆಕ್ ಮೊತ್ತದ ಸಂಬಂಧ ದಾಖಲು ಮಾಡಿದ್ದೇನೆ ಎಂದರೆ ಸರಿ. ನನ್ನ ಹೆಂಡತಿ ಅಕ್ಕನ ಮಕ್ಕಳ ಕಡೆಯಿಂದ ಜಯ, ಮಮತಾ, ಸರಸ್ವತಿ ಮತ್ತು ವಸಂತ ಎನ್ನುವವರ ವಿರುದ್ಧ ಚೆಕ್ ಸಂಬಂಧಿತ ಕೇಸನ್ನು ದಾಖಲು ಮಾಡಿಸಿದ್ದೇನೆ ಎಂದರೆ ಸುಳ್ಳು.

ನನ್ನ ತಾಯಿ ಹೆಸರಿಗೆ ಸರ್ಕಾರದಿಂದ ನಿವೇಶನವನ್ನು grant ಮಾಡಿದ್ದರು ಎಂದರೆ ಸರಿ. ಸರ್ಕಾರ ಬಡವರಿಗೆ ಮಾತ್ರ ನಿವೇಶನವನ್ನು ಮಂಜೂರು ಮಾಡುತ್ತಾರೆ ಎಂದರೆ ಸರಿ. ನನ್ನ ತಾಯಿಗೆ ಮಂಜೂರು ಮಾಡಲಾದ ನಿವೇಶವನ್ನು ನಾನು ಮತ್ತು ನನ್ನ ಅಣ್ಣ ವಿಂಗಡಿಸಿಕೊಂಡು ಮನೆಗಳನ್ನು ಕಟ್ಟಿಕೊಂಡಿದ್ದೇವೆ ಎಂದರೆ ಸರಿ. ಸದರಿ ಮನೆ ಹೊರತುಪಡಿಸಿ ನನಗೆ ಬೇರೆ ಇನ್ಯಾವುದೇ ಮನೆ ಇಲ್ಲವೆಂದರೆ ಸರಿ. ನನ್ನ ತಾಯಿಗೆ grant ಮಾಡಲಾದ ನಿವೇಶನದ ವಿಸ್ತೀರ್ಣ 30X40 ಅಡಿಗಳು ಎಂದರೆ ಸರಿ.

ಆರೋಪಿ ನನ್ನ ಹತ್ತಿರ ಹಣವನ್ನು ಜನವರಿ 2021 ರಲ್ಲಿ ಕೇಳಿರುತ್ತಾರೆ. ಅವರು ನನ್ನ ಹತ್ತಿರ ರೂ.6 ಲಕ್ಷ ಹಣ ಕೇಳಿದ್ದರು. ನಾನು ಡಿಸೆಂಬರ 2021 ರಲ್ಲಿ ಆರೋಪಿಗೆ ಹಣ ನೀಡಿರುತ್ತೇನೆ. ಆರೋಪಿಗೆ ಹಣ ನೀಡಿದ ಕಾಲಕ್ಕೆ ಆರೋಪಿಯ ತಾಯಿ, ಹೆಂಡತಿ ಹಾಗೂ ಮಗ ಹಾಜರಿದ್ದರು. ಆ ಸಮಯದಲ್ಲಿ ನನ್ನ ಹೆಂಡತಿ ಹಾಗೂ ನನ್ನ ಮಗ ಸಹ ಅಲ್ಲಿ ಹಾಜರಿದ್ದರು. ಆರೋಪಿ ನನಗೆ ಸೇಟ್?ಬ್ಯಾಂಕ್ ಆಫ್?ಇಂಡಿಯಾ ಗೆ ಸೇರಿದ ಚೆಕ್? ನೀಡಿದ್ದಾರೆ. 5-6 ತಿಂಗಳು ಕಳೆದ ನಂತರ ಹಣ ವಾಪಸು ಕೊಡುತ್ತೇನೆಂದು ಹೇಳಿ ಆರೋಪಿ ನನ್ನ ಹತ್ತಿರ ಹಣ ಪಡೆದಿರುತ್ತಾರೆ. ಆರೋಪಿ ಯಾವ ದಿನಾಂಕದಂದು ಚೆಕ್?ನೀಡಿದ್ದರು

ಎನ್ನುವ ಬಗ್ಗೆ ನೆನಪಿಲ್ಲ. ಆರೋಪಿಗೆ ನಾನು ನೀಡಿದ ಹಣವನ್ನು ನಾನು ಮನೆಯಲ್ಲಿಯೇ ಇಟ್ಟಿದ್ದೇನು.

ನನ್ನ ಹೆಂಡತಿ ಚೀಟಿ ವ್ಯವಹಾರ ಮಾಡುತ್ತಾರೆ ಎಂದರೆ ಸುಳ್ಳು. ಆರೋಪಿ ಮತ್ತು ಆತನ ತಾಯಿ ನನ್ನ ಹೆಂಡತಿ ಹತ್ತಿರ ರೂ.1 ಲಕ್ಷ ಗಳ ಚೀಟಿ ಹಾಕಿದ್ದರು ಎಂದರೆ ಸುಳ್ಳು. ಆರೋಪಿ 15 ಕಂತುಗಳನ್ನು ಚೀಟಿ ಸಂಬಂಧ ಕಟ್ಟಿದ್ದರು 16 ಕಂತನ್ನು ತೆಗೆದುಕೊಂಡರು ಎಂದರೆ ಸುಳ್ಳು. ಆರೋಪಿ ಚೀಟಿ ಎತ್ತಿ ಕೊಂಡ ಸಮಯದಲ್ಲಿ ಹಣದ ಭದ್ರತೆಗಾಗಿ ಒಂದು ಪ್ರನೋಟ್ ಮತ್ತು ಒಂದು ಚೆಕ್ ಅನ್ನು ನನ್ನ ಹೆಂಡತಿಗೆ ಕೊಟ್ಟಿದ್ದರು ಎಂದರೆ ಸುಳ್ಳು.

ಆರೋಪಿ ಗಾರೆ ಮತ್ತು ಕೂಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಆರೋಪಿಗೆ ಯಾವುದೇ ಜಮೀನು ಇಲ್ಲವೆಂದರೆ ನನಗೆ ಗೊತ್ತಿಲ್ಲ. ಆರೋಪಿ ತಾಯಿಗೂ ಕೂಡ ಸರ್ಕಾರ ಒಂದು ನಿವೇಶನವನ್ನು ಮಂಜೂರು ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಮತ್ತು ನಾನು ಒಂದೇ ಗ್ರಾಮದವರು ಎಂದರೆ ಸರಿ. ಆರೋಪಿ ಸರ್ಕಾರದಿಂದ ಮಂಜೂರು ಮಾಡಲಾದ ನಿವೇಶನದಲ್ಲಿ ಮನೆ ಕಟ್ಟಿಕೊಂಡು ವಾಸಿಸುತ್ತಿದ್ದಾರೆ ಎಂದರೆ ಸಾಕ್ಷಿಯು ಮನೆ ಇರುವುದು ನಿಜ ಆದರೆ ಮಂಜೂರು ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಆರೋಪಿ ಮನೆ ಸರ್ಕಾರದಿಂದ ಮಂಜೂರು ಮಾಡಲಾದ ನಿವೇಶನಗಳು ಇರುವ ಜಾಗದಲ್ಲಿ ಇರುತ್ತದೆ ಎಂದರೆ ಸುಳ್ಳು. ಆರೋಪಿಗೆ ಕಿವಿ ಸರಿಯಾಗಿ ಕೇಳಿಸುವುದಿಲ್ಲ ಎಂದರೆ ಸರಿ. ಆರೋಪಿ ಜಾಣನಲ್ಲ ಮತ್ತು ಆತನಿಗೆ ಓದು ಬರಹ ಬರುವುದಿಲ್ಲ ಎಂದರೆ ಸರಿ. ಆರೋಪಿ ಯಾವುದೇ ವ್ಯವಹಾರ ಮಾಡುವುದಿಲ್ಲ ಎಂದರೆ ಸರಿಯಲ್ಲ.

ಆರೋಪಿ ಮತ್ತು ನನ್ನ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲ ಎಂದರೆ ಸುಳ್ಳು. ಆರೋಪಿಗೆ ನಾನು ಹಣ ನೀಡಿದ ಸಮಯದಲ್ಲಿ ನನ್ನ ಹತ್ತಿರ ಹಣ ಇತ್ತು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ರೂ.20,000/- ಮೀರಿದ ಹಣಕಾಸಿನ ವ್ಯವಹಾರವನ್ನು ಬ್ಯಾಂಕ್?ಮುಖೇನ ಮಾಡಬೇಕೆಂದು ಸರ್ಕಾರದ ನಿಯಮವಿದೆ ಎಂದರೆ ನನಗೆ ಗೊತ್ತಿಲ್ಲ. ಚೀಟಿ ವ್ಯವಹಾರ ಮುಗಿದ ನಂತರ ತಾನು ಕೊಟ್ಟಿದ್ದ ಆನ್?ಡಿಮ್ಯಾಂಡ್?ಪ್ರನೋಟ್?ಮತ್ತು ಚೆಕ್?ಅನ್ನು ಆರೋಪಿ ನನ್ನ ಹೆಂಡತಿ ಹತ್ತಿರ ಕೇಳಿದ್ದರು

ಎಂದರೆ ಸುಳ್ಳು.  ನನ್ನ ಹೆಂಡತಿಗೆ ಚೀಟಿ ವ್ಯವಹಾರದ ಸಂಬಂಧ ಕೊಡಲಾಗಿದ್ದ ಚೆಕ್?ಅನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಕೇಸನ್ನು ಆರೋಪಿ ವಿರುದ್ದ ನಾನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ನಾನು ಸರ್ಕಾರಕ್ಕೆ ಆದಾಯ ತೆರಿಗೆ ಪಾವತಿಸುವುದಿಲ್ಲ.  ನನಗೆ ರೂ.6 ಲಕ್ಷಗಳನ್ನು ಕೊಡುವಷ್ಟು ಸಾಮರ್ಥ್ಯ ಇಲ್ಲವೆಂದರೆ ಸರಿಯಲ್ಲ.  ಸಾಧ್ಯವಾದರೆ ಆರೋಪಿಯಿಂದ ಅಕ್ರಮ ಲಾಭ ಪಡೆಯಬೇಕೆಂಬ ಉದ್ದೇಶದಿಂದ ಆತ ಚೀಟಿ ವ್ಯವಹಾರದ ಸಂಬಂಧ ನನ್ನ ಹೆಂಡತಿಗೆ ಕೊಟ್ಟಿದ್ದ ಚೆಕ್?ಅನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಕೇಸು ದಾಖಲು ಮಾಡಿದ್ದೇನೆ ಎಂದರ ಸರಿಯಲ್ಲ.  ನನಗೆ ಸೇರಿದ ಜಮೀನಿನ ಸಂಬಂಧ ಆರ್.ಟಿ.ಸಿ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಆರೋಪಿ ಹಣ ಬೇಕೆಂದು ನಮ್ಮ ಮನೆಯಲ್ಲಿ ಕೇಳಿದ್ದರು.

(ಈ ಹಂತದಲ್ಲಿ ಮಾನ್ಯ ಆರೋಪಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟಿ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ನೀಡಲಾಗಿದೆ)

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.